<u>ಕರ್ನಾಟಕ ಸರ್ಕಾರ</u>

ಸಂಖ್ಯೆ: ಆರ್‌ಡಿ 57 ಎಲ್‌ಜಿಪಿ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:27.11.2008.

<u>ಸುತ್ತೋಲೆ</u>

ವಿಷಯ: ಗೋಮಾಳ ಜಮೀನಿನಲ್ಲಿ ಗಣಿಗಾರಿಕೆಗೆ ಅನುಮತಿ ನೀಡುವ ಬಗ್ಗೆ.
ಉಲ್ಲೇಖ: 1) ಆರ್‌ಡಿ 72 ಎಲ್‌ಜಿಪಿ 98, ದಿ:24.02.99.
2) ಆರ್‌ಡಿ 74 ಎಲ್‌ಜಿಪಿ 2005, ದಿ:24.12.2005.
3) ಆರ್‌ಡಿ 83 ಎಲ್‌ಜಿಪಿ 2006, ದಿ:05.01.2007.

********

ಉಲ್ಲೇಖ (1)ರಲ್ಲಿನ ಸುತ್ತೋಲೆಯಲ್ಲಿ ಗೋಮಾಳ ಜಮೀನುಗಳಲ್ಲಿ ಹಲವಾರು ವರ್ಷಗಳಿಂದ ಕಲ್ಲು ಗಣಿ ಕೆಲಸ ನಡೆಸಿರುವ ಪ್ರದೇಶಗಳಲ್ಲಿ ಕಂದಾಯ ಇಲಾಖೆಯ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಜಂಟಿ ಸ್ಥಳ ಪರಿಶೀಲನೆಯಿಂದ ಪ್ರಮಾಣ ಸದರಿ ಪ್ರದೇಶಗಳು ಬಿಡಿಸಿ ಬಂಡೆಗಳಿಂದ ಹಾಗೂ ಕಲ್ಲಿನಿಂದ ಆವೃತವಾಗಿ ಬಂಜರು ಭೂಮಿಯಾಗಿದ್ದು, ಗೋಮಾಳವಾಗಿ ಉಪಯೋಗಿಸಲು ಬಾರದ ಪಕ್ಷದಲ್ಲಿ ಅಂತಹ ಪ್ರಕರಣಗಳಲ್ಲಿ ಕಲ್ಲುಗಣಿ ಗುತ್ತಿಗೆಗಳನ್ನು ನವೀಕರಿಸಲು ಹಾಗೂ ಹೊಸದಾಗಿ ಕಲ್ಲುಗಣಿ ಗುತ್ತಿಗೆ ಕೋರಿ ಬಂದಿರುವ / ಬರುವ ಅರ್ಜಿಗಳನ್ನು ಪರಿಶೀಲಿಸಿ ಕಲ್ಲುಗಣಿ ಗುತ್ತಿಗೆ ಮಂಜೂರಾತಿ ನೀಡಲು ಅವಕಾಶ ಕಲ್ಪಿಸಲಾಗಿದೆ.

ನಂತರ ಉಲ್ಲೇಖ (2)ರ ಸುತ್ತೋಲೆಯಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:14048/05ಕ್ಕೆ ಸಂಬಂಧಿಸಿದಂತೆ ದಿ:22.09.2005ರಂದು ನೀಡಿದ ತೀರ್ಪಿನ ಅನ್ವಯ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳಿಗೆ ಸಂಬಂಧಿಸಿದ ಯಾವುದೇ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸದಿರುವಂತೆ ಸೂಚಿಸಲಾಗಿತ್ತು. ಉಲ್ಲೇಖ (3)ರಲ್ಲಿನ ಸುತ್ತೋಲೆಯಲ್ಲಿ ರಾಜ್ಯ ಉಚ್ಛ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ:1353/2006, ರಿಟ್ ಅರ್ಜಿ ಸಂಖ್ಯೆ:3813/2005 ಮತ್ತು ರಿಟ್ ಅರ್ಜಿ ಸಂಖ್ಯೆ:31221/2005ಕ್ಕೆ ಸಂಬಂಧಿಸಿದಂತೆ ದಿ:18.11.2006ರಂದು ನೀಡಿದ ತೀರ್ಪಿನ ಅನ್ವಯ ಗೋಮಾಳ, ಗಾಯರಾಣ, ಹುಲ್ಲುಬನ್ನಿ ಜಮೀನುಗಳನ್ನು ಯಾವುದೇ ಖಾಸಗಿ ಸಂಸ್ಥೆಗಾಗಲಿ, ಖಾಸಗಿ ವ್ಯಕ್ತಿಗಾಗಲಿ ಅಥವಾ ಖಾಸಗಿ ಗಣಿಗಾರಿಕೆ ಉದ್ದೇಶಕ್ಕಾಗಲಿ ಮಂಜೂರು ಮಾಡಬಾರದು ಮತ್ತು ಇಂತಹ ಜಮೀನುಗಳೂ ಖಾಲಿಯಿದ್ದು, ಸಕ್ರಮೀಕರಣಕ್ಕಾಗಿ ಯಾವುದೇ ಅರ್ಜಿ ಬಾಕಿ ಇಲ್ಲದಿದ್ದಲ್ಲಿ ಅಂತಹ ಜಮೀನುಗಳನ್ನು ಗ್ರಾಮೀಣ ಸಮುದಾಯದ ಸಾರ್ವಜನಿಕ ಉದ್ದೇಶಕ್ಕೆ ಮೀಸಲಿರಿಸುವಂತೆ ಸೂಚಿಸಲಾಗಿತ್ತು.

ರಿಟ್ ಅರ್ಜಿ ಸಂಖ್ಯೆ:15882/2007ಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಚ ನ್ಯಾಯಾಲಯವು ದಿ:15.02.2008ರಂದು ನೀಡಿದ ತೀರ್ಪಿನಲ್ಲಿ ಉಲ್ಲೇಖ (3)ರ ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 83 ಎಲ್‌ಜಿಪಿ 2006, ದಿ:05.01.2007ನ್ನು ರದ್ದುಪಡಿಸಿ, ಗೋಮಾಳ ಜಮೀನಿನಲ್ಲಿ ಕಲ್ಲುಗಣಿಗಾರಿಕೆಗೆ ಗುತ್ತಿಗೆ ನವೀಕರಿಸುವ ಹಾಗೂ ಮಂಜೂರಾತಿ ನೀಡಲು ಸಲ್ಲಿಸಲಾಗಿರುವ ಅರ್ಜಿಗಳನ್ನು ಪರಿಗಣಿಸಿ ಇತ್ಯರ್ಥ ಪಡಿಸಲು ನಿರ್ದೇಶನ ನೀಡಿರುತ್ತದೆ.

ರಾಜ್ಯ ಉಚ್ಚ ನ್ಯಾಯಾಲಯದ ಮೇಲ್ಕಂಡ ದಿ:15.02.2008ರಂದು ನೀಡಿರುವ ಆದೇಶದನ್ವಯ ಗೋಮಾಳ ಜಮೀನಿನಲ್ಲಿ ಗಣಿಗಾರಿಕೆಗೆ ಮಂಜೂರಾತಿ ನೀಡುವ / ನವೀಕರಿಸುವ ಅರ್ಜಿಗಳ ಕುರಿತು ಉಲ್ಲೇಖ (1)ರ ಸರ್ಕಾರದ ಸುತ್ತೋಲೆ ದಿ:24.02.99ರಲ್ಲಿ ಕಾಣಿಸಿರುವ (ಅ) ಮತ್ತು (ಆ) ಷರತ್ತುಗಳನ್ವಯ ಕ್ರಮ ಕೈಗೊಂಡು ಇತ್ಯರ್ಥ ಪಡಿಸುವಂತೆ ಈ ಮೂಲಕ ಸೂಚಿಸಲಾಗಿದೆ.

(ಡಿ. ತಂಗರಾಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ.ಮಂ).

24680/08

ಇವರಿಗೆ,

1) ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾಂ/ಗುಲ್ಬರ್ಗಾ/ಮೈಸೂರು ವಿಭಾಗ.
2) ಎಲ್ಲಾ ಜಿಲ್ಲಾಧಿಕಾರಿಗಳು.
3) ಎಲ್ಲಾ ಉಪ ವಿಭಾಗಾಧಿಕಾರಿಗಳು. } ಜಿಲ್ಲಾಧಿಕಾರಿಗಳ ಮೂಲಕ.
4) ಎಲ್ಲಾ ತಹಶೀಲ್ದಾರರುಗಳು.

**ಪ್ರತಿ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
2) ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಗಣಿ).
2) ಸರ್ಕಾರದ ಉಪ ಕಾರ್ಯದರ್ಶಿಗಳ ಆಪ್ತ ಸಹಾಯಕರು, ಕಂದಾಯ ಇಲಾಖೆ (ಭೂ ಮಂಜೂರಾತಿ).
3) ಹೆಚ್ಚುವರಿ ಪ್ರತಿ / ಶಾಖೆಯ ರಕ್ಷಾ ಕಡತ.

ದಿ: 11/12/08

ನಂ: LND(1): 249/08-09

15/12/08